**<u>ಸಾಕ್ಷಿಯನ್ನು ದಿಃ 21.08.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ ಜಿ ಆರ್ ವಕೀಲರಿಂದ.</u>**

ರೇವಯ್ಯ ಬಿನ್ ಚಿಕ್ಕ ಬೋರಯ್ಯ ಎಂದರೆ ನನ್ನ ತಂದೆ. ಸಾಕ್ಷಿಗೆ ಎಂ ಆರ್ 11/93-94 ದಾಖಲೆಯನ್ನು ತೋರಿಸಲಾಗಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಆಧಾರದ ಮೇಲೆ ನಮ್ಮ ತಂದೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಆಗಿರುವ ಎಂ ಆರ್ 19/93-94 ದಾಖಲೆಯನ್ನು 2016 ರಲ್ಲಿ ನಾನು ನೋಡಿರುತ್ತೇನೆ. ಸದರಿ ಎಂ ಆರ್ ನ್ನು ಈ ದಾವೆಯಲ್ಲಿ ಪ್ರಶ್ನೆ ಮಾಡಿರುತ್ತೇವೆ. ನಿಪಿ-1 ರಲ್ಲಿ ಸಿದ್ದಲಿಂಗಮ್ಮ, ಲಲಿತ ಮತ್ತು ಶಾರದಮ್ಮನವರ ಹೆಸರು ಇಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಜೋಗಿಗೌಡರ ಮಕ್ಕಳಾದ ಮುನಿಯಮ್ಮ ಮತ್ತು ನಾಗಮ್ಮ ರವರ ಹೆಸರುಗಳನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಕಮಲಮ್ಮ ಮತ್ತು ಶಶಿಕಲ ರವರ ಹೆಸರನ್ನು ತೋರಿಸಿಲ್ಲ ಎಂದರೆ ಸರಿ. ನಿಪಿ-2 ರಿಂದ 7 ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-2 ರಿಂದ 7 ರಲ್ಲಿ ಇರುವ ಮಾಹಿತಿಗಳು ಸರಿಯಾಗಿರುತ್ತದೆ.ನಿಪಿ-8 ನ್ನು ನಾನು ಓದಿ ತಿಳಿದು ಕೊಂಡಿರುತ್ತೇನೆ. ಸಾಕ್ಷಿ ಮುಂದುವರಿದು ಆ ದಾಖಲೆಯನ್ನು ಪ್ರತಿವಾದಿಗಳು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ದಾಖಲೆಗೆ ಸಂಬಂಧಿಸಿದಂತೆ ಈ ದಾಖಲೆಯನ್ನು ಹೊರತುಪಡಿಸಿ ನಾನು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ನಾವು ಮತ್ತು ಪ್ರತಿವಾದಿಗಳು ಈಗ ಒಟ್ಟು ಕುಟುಬಂದಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ದಾವಾ ಆಸ್ತಿಯು ಒಟ್ಟು ಕುಟುಬಂದ ಆಸ್ತಿ ಎಂದು ನುಡಿಯುತ್ತಾರೆ. ನಮ್ಮ ತಂದೆ ಮತ್ತು ಅವರ ಸಹೋದರರು ಸುಮಾರು 45 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತಾರೆ. ನಮ್ಮ ತಂದೆ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಾಗ ದಾವಾ ಆಸ್ತಿಯ ಖಾತೆಯು ಮೂಲ ಮಾಲೀಕರಾದ ಲಕ್ಕ ಬಿನ್ ಕೂರ್ಲ ರವರ ಹೆಸರಿನಲ್ಲಿ ಇತ್ತು. ಸದರಿ ಆಸ್ತಿಯು ಲಕ್ಕ ಬಿನ್ ಕೂರ್ಲ ರವರ ಹೆಸರಿನಲ್ಲಿ ಇತ್ತು ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಮಾಡಿರುತ್ತೇನೆ. ದಾವಾ ಆಸ್ತಿಯ ಪಹಣಿಯನ್ನು 1997 ನೇ ಇಸವಿಯಲ್ಲಿ ಸೃಷ್ಟಿ ಮಾಡಿಕೊಂಡಿರುತ್ತಾರೆ. ದಾವಾ ಆಸ್ತಿಯು 3 ಎಕರೆ ಇದೆ ಎಂದು ತೋರಿಸಲುನಮ್ಮ ತಾತ ಬರೆಸಿಕೊಂಡಿರುವ ಕ್ರಯ ಪತ್ರವನ್ನು ಹಾಜರುಮಾಡಿರುತ್ತೇನೆ. ದಾವಾ ಆಸ್ತಿಯು ಈಗ 1 ಎಕರೆ 37 ಗುಂಟೆ ವಿಸ್ತೀರ್ಣ ಇದೆ. ನಾನು ಈ ದಾವೆಯನ್ನು 3 ಎಕರೆ ವಿಸ್ತೀರ್ಣ

ಕ್ಕೆ ಸಂಬಂಧಿಸಿದಂತೆ ಹಾಕಿರುತ್ತೇನೆ. ದಾವೆ ಸಲ್ಲಿಸುವ ಕಾಲಕ್ಕೆ ಸ.ನಂ. 8/5, 3 ಎಕರೆ ಇದೆ ಎಂದುತೋರಿಸಲುನಾನು ಯಾವುದೇ ದಾಖಲೆಯನ್ನು ಹಾಕಿಲ್ಲ. ಈ ದಾವೆಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾ ಇಲ್ಲದಿದ್ದರೂ ಸಹ ಪ್ರತಿವಾದಿಗಳ ಆಸ್ತಿಯನ್ನು ಹೊಡೆದು ಕೊಳ್ಳುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.